33 ಶ್ರೀ ಖಾದರ್ ಯು.ಟಿ (ಮಂಗಳೂರು)

ಬಿ.ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಸರ್ಕಾರಿ ಪ್ರಾಥಮಿಕ ಘಟಕ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ ಹಾಗಿದ್ದಲ್ಲಿ, ಮೇಲ್ದರ್ಜೆಗೇರಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಪ್ರಸಕ್ತ ಆರ್ಥಿಕ ವರ್ಷದಿಂದಲೇ ಜಾರಿಗೊಳಿಸಲಾಗುವುದೇ?

ರಾಜ್ಯದಲ್ಲಿರುವ 516 ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಈಗಾಗಲೇ ಮೇಲ್ದರ್ಜೆಗೇರಿಸಲಾಗಿದೆ.

ಈಗಾಗಲೇ ರಾಜ್ಯದಲ್ಲಿನ ಅನೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದ್ದು, ಸದರಿ ಮೇಲ್ದರ್ಜೆಗೇರಿಸಲಾದ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಒದಗಿಸಬೇಕಾಗಿರುವ ಮೂಲಭೂತ ಸೌಕರ್ಯ ಹಾಗೂ ಸಿಬ್ಬಂದಿಯನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸಲು ಸಾಧ್ಯವಾಗಿರುವುದಿಲ್ಲ. ಈಗಾಗಲೇ ಮೇಲ್ದರ್ಜೆಗೇರಿಸಿರುವ ಅಂತಹ ಕೇಂದ್ರಗಳಿಗೆ ಸೌಲಭ್ಯ ಒದಗಿಸಿ ಬಲಪಡಿಸಬೇಕಾಗಿದೆ. ಆದುದರಿಂದ ಸದ್ಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

36 ಶ್ರೀ ಗೋಪಾಲ ಭಂಡಾರಿ.ಹೆಚ್.

ಬಿ.ಎನ್. ಬಚ್ಚೇಗೌಡ(ಕಾರ್ಮಿಕ ಸಚಿವರು)

ಅ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಯಾವ ಯಾವ ತಾಲ್ಲೂಕಿ ನಿಂದ ಬೀಡಿ ಕಾರ್ಮಿಕರ ವಸತಿಗಾಗಿ ಆರ್ಥಿಕ ಸಹಾಯ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; [ತಾಲ್ಲೂಕುವಾರು, ವರ್ಷವಾರು ವಿವರ ಒದಗಿಸುವುದು];

ಇಂಟಿಗ್ರೇಟೆಡ್ ಹೌಸಿಂಗ್ ಸ್ಕೀಂ ಎನ್ನುವ ಯೋಜನೆ ಅಡಿ ಕೇಂದ್ರ ಸರ್ಕಾರದ ಮಂಡಳಿಯಾದ ಬೀಡಿ ಕಲ್ಯಾಣ ಮಂಡಳಿಯು ಬೀಡಿ ಕಾರ್ಮಿಕರ ವಸತಿಗಾಗಿ ಆರ್ಥಿಕ ಸಹಾಯ ನೀಡುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಅರ್ಜಿಯನ್ನು ಫಲಾನುಭವಿಗಳು ಜಿಲ್ಲಾಧಿಕಾರಿಗಳ ಮುಖಾಂತರ ಕಲ್ಯಾಣ ಆಯುಕ್ತರು, ಬೀಡಿ ಕಲ್ಯಾಣ ಮಂಡಳಿ ಇವರಿಗೆ ಸಲ್ಲಿಸುತ್ತಾರೆ. ಈ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿರುವ ಕಾರಣ ಹಾಗೂ ಕಾರ್ಮಿಕ ಇಲಾಖೆಯ ಪಾತ್ರವು ಇಲ್ಲವಾದ ಕಾರಣ, ಈ ಮಾಹಿತಿಯು ಕಾರ್ಮಿಕ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ.

ಆ ಈ ಪೈಕಿ ಮಂಜೂರಾಗಿ ಹಣ ಪಾವತಿಯಾದ ಅರ್ಜಿಗಳ ಸಂಖ್ಯೆ ಎಷ್ಟು; ಮಂಜೂರಾಗಿ ಹಣ ಪಾವತಿಯಾಗದೆ ಉಳಿದ ಅರ್ಜಿಗಳ ಸಂಖ್ಯೆ ಎಷ್ಟು; ಅವು ಯಾವ ಹಂತದಲ್ಲಿವೆ;

ಉದ್ಭವಿಸುವುದಿಲ್ಲ.

ಇ ಈ ರೀತಿ ಬಂದ ಅರ್ಜಿಗಳನ್ನು ಮಂಜೂರಾತಿ ಮಾಡಲು ಬೇಕಾಗುವ ಸಮಯವೆಷ್ಟು; ಸದರಿ ಬಾಕಿ ಅರ್ಜಿಗಳನ್ನು ಯಾವಾಗ ವಿಲೇವಾರಿ ಮಾಡಲಾಗುವುದು?

ಉದ್ಭವಿಸುವುದಿಲ್ಲ

38 ಶ್ರೀ ಜಯಚಂದ್ರ ಟಿ.ಬಿ. (ಶಿರಾ)
ಪ್ರೊ.ಮುಮ್ತಾಜ್ ಅಲಿ ಖಾನ್(ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ ತುಮಕೂರು ಜಿಲ್ಲೆಯ ಶಿರಾ ನಗರದಲ್ಲಿರುವ ವಕ್ಫ್ ಮಂಡಳಿಗೆ ಸೇರಿದ ಜಾಗವೆಷ್ಟು (ಅವುಗಳ ಸಂಪೂರ್ಣ ವಿವರ ನೀಡುವುದು)

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ ವಕ್ಫ್ ಮಂಡಳಿಗೆ ಸೇರಿದ ಜಾಗದ ವಿವರವನ್ನು ಅನುಬಂಧದಲ್ಲಿ ವಿವರಿಸಲಾಗಿದೆ. ಅದರ ಪೈಕಿ ಎರಡು ವಕ್ಫ್ ಸಂಸ್ಥೆಗಳು ಪ್ರಾಚಾರಾ ಸಂಶೋಧನ ಇಲಾಖೆಗೆ ಸಂಬಂಧಿಸಿರುತ್ತದೆ.

ಆ ಶಿರಾ ಐತಿಹಾಸಿಕವಾಗಿ ಮುಸ್ಲಿಂ ದೊರಗಳ ಆಳ್ವಿಕೆಗೆ ಸೇರಿದ ಪ್ರದೇಶವಾಗಿದ್ದು, ಅನೇಕ ಮಸೀದಿಗಳು ಮತ್ತು ಖಬರಸ್ಥಾನಗಳು ಇಂದು ಸ್ಮಾರಕ ಮಾದರಿಯಲ್ಲಿ ರಾರಾಜಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಹೌದು

ಇ ಹಾಗಿದ್ದಲ್ಲಿ, ಅವುಗಳ ಜೀರ್ಣೋದ್ಧಾರಕ್ಕೆ ವಿಶೇಷ ಹಣ ಬಿಡುಗಡೆ ಮಾಡಲಾಗುವುದೇ?

ಸರ್ಕಾರಕ್ಕೆ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

39 ಶ್ರೀ ಜಯಚಂದ್ರ ಟಿ.ಬಿ(ಶಿರಾ)
ಬಿ. ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ ಬೆಂಗಳೂರು ಸುಬೇದಾರ್ ಛತ್ರ ರಸ್ತೆಯಲ್ಲಿರುವ (ಶೇಷಾದ್ರಿಪುರಂ) ಮಳವಳ್ಳಿ ಚಿಕ್ಕಣ್ಣ ಚಾರೀಟೀಸ್ ರವರು ಕಳೆದ 50 ವರ್ಷದ ಹಿಂದೆ ಆಸ್ಪತ್ರೆಗಾಗಿ ಕಟ್ಟಡ ನಿರ್ಮಿಸಿ ಆಸ್ಪತ್ರೆ ತೆರೆಯಲು ದಾನವಾಗಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು, ಸರ್ಕಾರದ ಗಮನಕ್ಕೆ ಬಂದಿದೆ.